ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY

ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080- / 22131385 E-Mail ID: registrar@bcu.ac.in

ಸಂಖ್ಯೆ :ಬಿಸಿಯು/ಎ.ಸಿ.ಎ/ LIC/02 2024–25 ದಿನಾಂಕ.10.06.2024

## ಸುತ್ತೋಲೆ

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಸಂಯೋಜಿತ ಕಾಲೇಜುಗಳಿಗೆ ಸ್ಥಳೀಯ ತನಿಖಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ UUCMS ಮೂಲಕ ವರದಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ; ಇಡಿ 166 ಯುಎನ್‌ಇ 2024 ದಿನಾಂಕ: 08.05.2024.
2. ವಿ.ವಿ ಅಧಿಸೂಚನೆ ಸಂಖ್ಯೆ: ಬೆಂ.ನ.ವಿ/ಶೈ/ಸಂಖ್ಯೆ/01/ಸಂಯೋಜನೆ/2024–25, ದಿನಾಂಕ: 14.05.2024.
3. ಮಾನ್ಯ ಕುಲಪತಿಗಳು ಅನುಮೋದನೆ ದಿನಾಂಕ: 10.06.2024.

*****

ಉಲ್ಲೇಖಿತ (2) ರ ಅಧಿಸೂಚನೆಯ ಪ್ರಕಾರ 2024–25ನೇ ಶೈಕ್ಷಣಿಕ ಸಾಲಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಸಂಯೋಜಿತ ಕಾಲೇಜುಗಳಿಗೆ ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡುವ ಸಲುವಾಗಿ UUCMS ಮೂಲಕ ಅಪ್‌ಲೋಡ್ ಮಾಡಲಾದ ವರದಿಯನ್ನು ಆಯಾಯ ಕಾಲೇಜುಗಳು ಸಲ್ಲಿಸಿರುತ್ತಾರೆ.

ಈ ಸಂಬಂಧ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಗೆ ಸ್ಥಳೀಯ ವಿಚಾರಣಾ ಸಮಿತಿಗಳು ಭೇಟಿ ನೀಡಿ ಪರಿಶೀಲಿಸಿ UUCMS ಮೂಲಕ ವರದಿಯನ್ನ ಸಲ್ಲಿಸಬೇಕಾಗಿದೆ. ಸಂಬಂಧಪಟ್ಟ ಕಾಲೇಜುಗಳು ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪರಿಶೀಲನೆಗೆ ಅಗತ್ಯವಾದ ದಾಖಲೆಗಳನ್ನು ಒದಗಿಸಿಕೊಟ್ಟು ಸಹಕರಿಸಲು ಸೂಚಿಸಲಾಗಿದೆ.

ಹೊಸ ಕಾಲೇಜುಗಳು ಹಾಗೂ ನವೀಕರಣ ಕಾಲೇಜುಗಳ, ಹೊಸ ಕೋರ್ಸ್ ಹಾಗೂ ಹೆಚ್ಚಿನ ಪ್ರವೇಶಾತಿ ಪ್ರಮಾಣ, ಸ್ಥಳ ಬದಲಾವಣೆ ನವೀಕರಣ, ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಸ್ಥಳೀಯ ವಿಚಾರಣಾ ಸಮಿತಿಯು ಪರಿಶೀಲನೆ ನಡೆಸಿ ಶಿಫಾರಿಸ್ಸಿನ ಅನ್ವಯ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ ಸ್ಥಳೀಯ ವಿಚಾರಣ ಸಮಿತಿಗಳು ದಿನಾಂಕ 11.06.2024 ರಿಂದ ಕಾಲೇಜುಗಳಿಗೆ ಭೇಟಿ ನೀಡಲು ಪ್ರಾರಂಭಿಸುತ್ತಾರೆ. ಎಲ್ಲಾ ಕಾಲೇಜಿನ ಪ್ರಾಂಶುಪಾಲರುಗಳು ಅಗ್ಯತ ಸಿದ್ಧತೆ ಮಾಡಿಕೊಳ್ಳಲು ಸೂಚಿಸಲಾಗಿದೆ.

ಕುಲಸಚಿವರು

ಪ್ರತಿಗಳು:

1. ಎಲ್ಲಾ ಸಂಯೋಜಿತ ಕಾಲೇಜಿನ ಪ್ರಾಂಶುಪಾರುಗಳಿಗೆ ಬೆಂ.ನ.ವಿ, ಬೆಂಗಳೂರು.
2. ಕುಲಪತಿಗಳು/ಕುಲಸಚಿವರು/ ಕುಲಸಚಿವರು(ಮೌಲ್ಯಮಾಪನ), ರವರ ಆಪ್ತ ಕಾರ್ಯದರ್ಶಿಗಳಿಗೆ, ಬೆಂನ.ವಿ ಬೆಂಗಳೂರು.
3. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಲತಾಣ www.bcu.ac.in ರಲ್ಲಿ ಪ್ರಕಟಿಸಲು.
4. UUCMS ಜಾಲತಾಣ ಬೆಂಗಳೂರು.
5. ರಕ್ಷಾ ಕಡತ.